KATK010032612022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.75/2022</u>**

ಪ್ರಾ.ಸಾ. ಃ **1**

ದೋ.ಸಾ. ಃ **6**

ದಿ.**20.11.2024**

| | |
|---|---|
| ಹೆಸರು | ಃ ನಾಗರಾಜು |
| ತಂದೆಯ ಹೆಸರು | ಃ ಲೇಟ್ ಆಂಜನಪ್ಪ |
| ವಯಸ್ಸು | ಃ **65** ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸಸ್ಥಳ | ಃ ಮಂಚಗೊಂಡನಹಳ್ಳಿ |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ಈಗ ನನಗೆ ತೋರಿಸಿದ ಅಮಾನತ್ತು ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಆ ಅಮಾನತ್ತು ಪಂಚನಾಮೆಯನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಆ ಸಹಿಯನ್ನು 2-3 ವರ್ಷಗಳ ಹಿಂದೆ ನನ್ನ ಮನೆಯಲ್ಲಿ ಮಾಡಿದ್ದೇನೆ. ಆ ಸಹಿಯನ್ನು ಏತಕ್ಕಾಗಿ ಮಾಡಿದ್ದೇನೆಂದು ನನಗೆ ಗೊತ್ತಿಲ್ಲ. ನಾನು ನಿಶಾನೆ ಪಿ1 ಮಹಜರನ್ನು ಓದಿ ನೋಡಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

(ಈ ಸಾಕ್ಷಿಯು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು

ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ঃ**

2. ದಿ.29.06.2019 ರಂದು ಮಧ್ಯಾಹ್ನ 2.45 ರಿಂದ 3.45 ಗಂಟೆಯ ಅವಧಿಯಲ್ಲಿ ಪೋಲೀಸರು ಕ್ಯಾತಂದ್ರ ಪೋಲೀಸ್ ಠಾಣೆಗೆ ನನ್ನನ್ನು ಮತ್ತು ಹನುಮಂತರಾಯಪ್ಪನನ್ನು ಕರೆಸಿ ಠಾಣೆಯಲ್ಲಿ ಹಾಜರಿದ್ದ ಪಿ.ಬಿ.ವಸಂತರಾಮ ಆರೋಪಿಗಳು ಕೃತ್ಯಕ್ಕೆ ಬಳಸಿದ ಆಯುಧಗಳನ್ನು ಸಂಗ್ರಹಿಸಿಟ್ಟಿದ್ದನ್ನು ಹಾಜರು ಮಾಡಿದ ಮೇರೆಗೆ ನಿಶಾನೆ ಪಿ1 ರಂತೆ ಮಹಜರ್ ಮಾಡಿ ಒಂದು ಸಾರ್ವೆ ದೊಣ್ಣೆ, ಒಂದು ಹಿಡಿಗಾತ್ರದ ಕಬ್ಬಿಣದ ರಾಡ್, ಒಂದೂವರೆ ಅಡಿ ಉದ್ದದ ಕಬ್ಬಿಣದ ಮಚ್ಚು, ಒಂದು ಕಬ್ಬಿಣದ ಮರದ ಹಿಡಿ ಇರುವ ಕುಡುಗೋಲು, ಮುಕ್ಕಾಲು ಇಂಚು ಉದ್ದದ ಕಬ್ಬಿಣದ ಚಾಕು, 3 ಅಡಿ ಉದ್ದದ ತೆಂಗಿನ ಕಡ್ಡಿಯ ಪೊರಕೆ, ಒಂದು ತುಂಬುತೋಳಿನ ರಕ್ತದ ಕಲೆ ಇರುವ ಶರ್ಟ್ ಮತ್ತು ಖಾರದ ಪುಡಿಯನ್ನು ಅಮಾನತ್ತುಪಡಿಸಿಕೊಂಡು ಮಹಜರನ್ನು ನನಗೆ ಓದಿ ಹೇಳಿ, ನಾನು ಅದನ್ನು ಅರ್ಥೈಸಿ ಕೊಂಡು ಮಹಜರಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ ವಕೀಲರಿಂದ ಆರೋಪಿತರ ಪರವಾಗಿ ঃ**

ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು